ಅನಂತಪದ್ಮನಾಭ ಎಚ್.ಎಂ., ಮೈಸೂರು

ದಿನದ 24 ಗಂಟೆಯೂ ಚಂದ್ರನ ಬೆಳದಿಂಗಳು ಇದ್ದಿದ್ದರೆ ಪ್ರೇಮಿಗಳ ಜೀವನ ಹೇಗಿರುತ್ತಿತ್ತು?



ವಿಪರೀತ ವಿಟಮಿನ್ ಡಿ ಕೊರತೆಯಿಂದ ಒಟ್ಟಿಗೆ ಸ್ಟೆಪ್ಸ್ ಹಾಕುವುದು ಕಷ್ಟವಾಗುತ್ತಿತ್ತು.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ವಿದ್ಯಾವಂತ, ಬುದ್ಧಿವಂತ ಮತ್ತು ಪ್ರಜ್ಞಾವಂತ – ಇವರಲ್ಲಿ ನಿಮಗೆ ಯಾರು ಇಷ್ಟ?

ಪ್ರಜ್ಞಾವಂತನೇ – ಪ್ರಜ್ಞೆಯಿರದಿದ್ದರೆ ಮಿಕ್ಕೆರಡೂ ವ್ಯರ್ಥ.

ಜಯಲಕ್ಷ್ಮಿ ಉಪಾಧ್ಯಾಯ, ಕಂಚಾರ್ತಿ

ಸಿನಿಮಾ ನಟರಿಗೆ ಮಾತ್ರ ಅಭಿಮಾನಿಗಳ ಸಂಘಗಳಿರುತ್ತವೆ. ನಟಿಯರಿಗೆ ಏಕೆ ಇರುವುದಿಲ್ಲ?

ನಟರಂತೆ ನಟಿಯರು ನಾಲ್ಕೈದು ದಶಕಗಳು 'ಬಾಳಿಕೆ' ಬರುವುದಿಲ್ಲವಂತೆ.

ಶೃತಿ ರಿಗ್ರೆಟ್ ಐಯ್ಯರ್, ಅಮೆರಿಕಾ

ನಾಯಿ ಮನೆ ಕಾಯುತ್ತೆ, ಕತ್ತೆ ನಮ್ಮ ವಸ್ತುಗಳ ಭಾರ ಹೊರುತ್ತೆ. ಮತ ಗಿಟ್ಟಿಸಿದ ನಾಯಕ?



ನಾಯಿಯಂತೆ ಕಚ್ಚಾಡುತ್ತಾನೆ, ಕತ್ತೆಯಂತೆ ಒದೆಯುತ್ತಾನೆ.

ಆರತಿ ಘಟಿಕಾರ್, ಬೆಂಗಳೂರು

ರಾಜಕಾರಣಿಗಳ ಹೇಳಿಕೆಗಳನ್ನೆಲ್ಲ ಸೇರಿಸಿ ಒಂದು ಜೋಕ್ ಪುಸ್ತಕ ಪ್ರಕಟಿಸಬಹುದಲ್ಲ ಸಾರ್?

ಆದರೆ 'ನನ್ನ ಜೋಕೇ ಮೊದಲಿರಬೇಕಿತ್ತು' ಎಂಬ ಭಿನ್ನಮತ ಮೂಡುವುದರಿಂದ, ಸಾಧ್ಯವಿಲ್ಲ.

ಅನಸೂಯ ಟಿ, ಕೇದಿಗೆಮನೆ

ಸದಾ ಎಲ್ಲರನ್ನೂ ಕಾಡುವ ಒಂದು ಪ್ರಶ್ನೆ ಯಾವುದು?

'ಈಗ್ಲೇ ಇಷ್ಟು ಕುಲಗೆಟ್ಟಿದೆ, ಮುಂದೆ ಹೇಗೋ ಏನೋ...'

ಬಿ.ಆರ್. ಉಷಾ, ಕೆನಡಾ

ರೈತರು ದುಡಿದರೆ ಜನರಿಗೆ ಊಟ. ಮಂತ್ರಿಗಳು ದುಡಿದರೆ?

ಕಲ್ಲುಬಂಡೆಗಳು ದುಡಿಯುವುದಿಲ್ಲ ಮೇಡಮ್, ಕೇವಲ ಅಪ್ಪಳಿಸುತ್ತವೆ.

ಪಿ. ಜಯವಂತ ಪೈ, ಕುಂದಾಪುರ

ಮತಯಾತ್ರೆಗೂ, ತೀರ್ಥಯಾತ್ರೆಗೂ ವ್ಯತ್ಯಾಸವೇನು?

ತೀರ್ಥಯಾತ್ರೆಗೆ ಹೊರಟವರಿಗೆ ಪಾಪವನ್ನು ಕಳೆದುಕೊಳ್ಳುವ ಯೋಚನೆ ಇರುತ್ತದೆ.

ಆರ್. ಮಧುಸೂದನ್, ಹಾಸನ

ಚುನಾವಣೆಗೆ ನಿಲ್ಲುವಾಗ 'ಒಂದು ಅವಕಾಶ ನನಗೆ ಕೊಡಿ' ಎಂದು ಅಂಗಲಾಚುವುದೇಕೆ?

ಭೂತಪಿಶಾಚಿಗಳನ್ನು ಒಮ್ಮೆ ಆವಾಹನೆ ಮಾಡಿಕೊಂಡರೆ ಉಚ್ಚಾಟನೆ ದುಸ್ಸಾಧ್ಯವೆಂದು ಗೊತ್ತಿರುತ್ತದೆ.

ಪಿ.ಜೆ. ರಾಘವೇಂದ್ರ, ಮೈಸೂರು

ಕರದಳ, ದಳಕಮಲ ಸರ್ಕಾರ ಬಂತು. ಕರಕಮಲ ಸರ್ಕಾರ ಬರುವುದೆಂತು?

(Raw ಹುಳಕ್ಕೆ ಪಾರುಪತ್ಯ ಕೊಟ್ಟರೆ) ಆ ದಿನಗಳೂ ದೂರವಿರುವುದಿಲ್ಲ.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು

ರಾಮ್, ಈ ಪ್ರಶ್ನೆಗಳ ಪ್ರವಾಹದಲ್ಲಿ ಎಂದಾದರೂ ಕೊಚ್ಚಿಹೋಗಿದ್ದೀರಾ?

ಇದು ಪ್ರವಾಹವಲ್ಲ, ಸರ್ಫಿಂಗ್ ಮಾಡಲು ಸುಂದರ ಸವಾಲೆಸೆಯುವ ಅಲೆಗಳು.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಹಿಂದೆ ಆರತಿಗೊಬ್ಬ ಮಗಳು; ಕೀರುತಿಗೊಬ್ಬ ಮಗ. ಈಗ?

ಆ ರತಿಗೊಬ್ಬ ಗಂಡ; ಕರ್ಲ್ಲುವುದಕ್ಕೊಂದು ಮಗು.

ಬಿ. ಬಸವರಾಜ್, ಹರಿಹರ

ಮಕ್ಕಳ ಸಂಪಾದನೆಯಲ್ಲಿ ತಂದೆ ತಾಯಿಗಳಿಗೆ ಪಾಲು ಸಿಗುವಂತಾದರೆ?

ಕೆಲವು ಮಕ್ಕಳಂತೂ ಕಳ್ಳಲೆಕ್ಕ ತೋರಿಸುವುದು ಖಚಿತ.

## ಬಹುಮಾನಿತ ಪ್ರಶ್ನೆ

ಸುಬ್ಬಲಕ್ಷ್ಮಿ ಹೆಚ್.ಕೆ., ಕೋಲಾರ

ಈ ಬ್ರೋ ಎನ್ನುವ ಪದ ಎಲ್ಲಿ ಹುಟ್ಟಿಕೊಂಡಿತು?

ಕೋಬ್ರದರ್ ಕೋಬ್ರಾ ಆದದ್ದೇ ಇದಕ್ಕೆ ಪ್ರೇರಣೆಯಂತೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ವೈದ್ಯರು ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕೇಳುತ್ತಾರಲ್ಲ, ಏಕೆ ಇರಬಹುದು?

ಪಲ್ಸು ಪರ್ಸು ತಿಳಿಯದೆ ಬಿಲ್ಲು ಕೊಡಕ್ಕೆ ಆಗಲ್ಲ.

ಜಗದೀಶ ಬಿ. ಹೊಸೂರು, ಮೈಸೂರು

ನಮ್ಮ ದೇಶದಲ್ಲಿರುವ ಒಂದೇ ಒಂದು ಜಾತಿರಹಿತ ಪಕ್ಷದ ಹೆಸರು ತಿಳಿಸಿ?

ಮೂರಿವೆ – ಶುಕ್ಲಪಕ್ಷ, ಕೃಷ್ಣಪಕ್ಷ, ಪಿತೃಪಕ್ಷ.

ರಾಮಸ್ವಾಮಿ, ಭೀಮನಕಟ್ಟೆ

ಮರದಿಂದ ಮರಕ್ಕೆ ಹಾರುವುದನ್ನು ಮಂಗವು ರಾಜಕಾರಣಿಗಳಿಂದ ಕಲಿಯಿತೆ?



ಛೆ! ಮಂಗಕ್ಕೂ ರಾಜಕಾರಣಿಯ ಶಿಷ್ಯನಾಗುವಷ್ಟು ಕೋತಿಬುದ್ಧಿ ಇರುವುದಿಲ್ಲ.

ಮಹಾವೀರ ಕಾಸರ, ಶಿವಮೊಗ್ಗ

ನಾಯಿಯ ಉಪಚಾರ ಹೆತ್ತ ತಾಯಿಗೆ ಏಕಿಲ್ಲ?

ತಾಯಿ ಕಚ್ಚುವುದಿಲ್ಲ, ಓಡಿಹೋಗುವುದಿಲ್ಲ ಎಂದು ತಿಳಿದಿರುವುದರಿಂದ.

ವಿ. ಹಮೀದ್, ವಿಟ್ಲ

ವಿವಾಹದ ಮೊದಲು ಇರುವ ಖುಷಿ ನಂತರ ಇರುವುದಿಲ್ಲವಲ್ಲ, ಏಕೆ?

ಆಗ ಗಿಣಿಯಾಗಿ ಉಲಿದವಳು ಈಗ ಪತಿಯ ಬೇಜವಾಬ್ದಾರಿಗೆ ನಾಗಿಣಿ ಆಗಿರುವುದರಿಂದ.

ಅಂಚೆ ಸುಬ್ರಹ್ಮಣ್ಯ, ಕೊಪ್ಪ

ವ್ಯಕ್ತಿ ಮೇಲೋ, ಶಕ್ತಿ ಮೇಲೋ? ಗೆಲುವು ಯಾವುದಕ್ಕೆ?

ಗೆಲುವು ದುಷ್ಟಶಕ್ತಿಗೇ. ನಮ್ಮಲ್ಲಿ ಪರಸ್ಪರರ ಆಳ ಬಲ್ಲ ವ್ಯಕ್ತಿಗಳಿದ್ದಾರೆ, ಆಳಬಲ್ಲ ಅರ್ಹರು ವಿರಳ.

■ ರಾಮ್